# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ : 543(589)
ಸದಸ್ಯರ ಹೆಸರು : ಡಾ. ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 14.08.2025
ಉತ್ತರಿಸುವ ಸಚಿವರು : ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿರುವ ಶ್ರೀ ಛತ್ರಪತಿ ಷಹಾಜಿ ರಾಜೆ ಬೋಸಲೆರವರ ಸ್ಮೃತಿ ಸ್ಥಳ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆಯಿಂದ ಕಳೆದ 3 ವರ್ಷಗಳಿಂದ ಬಿಡುಗಡೆ ಮಾಡಲಾಗಿರುವ ಅನುದಾನವೆಷ್ಟು; | ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿರುವ ಶ್ರೀ ಛತ್ರಪತಿ ಷಹಾಜಿ ರಾಜೆ ಬೋಸಲೆರವರ ಸ್ಮೃತಿ ಸ್ಥಳ ಅಭಿವೃದ್ಧಿಗೆ ಪ್ರವಾಸೋದ್ಯಮ ಇಲಾಖೆಯಿಂದ ಕಳೆದ 03 ವರ್ಷಗಳಲ್ಲಿ ಯಾವುದೇ ಅನುದಾನ ಬಿಡುಗಡೆ ಮಾಡಲಾಗಿರುವುದಿಲ್ಲ.. |
| ಆ) | ಈ ಯೋಜನೆಗೆ ಯಾವ ಯಾವ ಯೋಜನಾ ವರ್ಷದಲ್ಲಿ ಯಾವ ಯೋಜನೆಯಡಿಯಲ್ಲಿ ಅನುದಾನ ಮಂಜೂರಾಗಿದೆ; | ಸರ್ಕಾರದ ಆದೇಶ ಸಂಖ್ಯೆ:ಟಿಓಆರ್/149/ ಟಿಡಿಪಿ/2022(2), ದಿನಾಂಕ:21.06.2022 ರಲ್ಲಿ ಚನ್ನಗಿರಿ ತಾಲ್ಲೂಕಿನ ಹೊದಿಗೆರೆ ಗ್ರಾಮದಲ್ಲಿರುವ ಶಿವಾಜಿ ಮಹಾರಾಜರ ತಂದೆಯಾದ ಷಹಾಜಿ ರಾಜೆ ಬೋಸ್ಲೆ ಇವರ ಸಮಾಧಿಯ ಬಳಿ ಮುಖ್ಯ ಪ್ರವೇಶ ದ್ವಾರ ನಿರ್ಮಾಣ ಕಾಮಗಾರಿಯನ್ನು ರೂ.25.00 ಲಕ್ಷಗಳ ಅಂದಾಜಿನಲ್ಲಿ ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ (ಕೆ.ಟಿ.ಐ.ಎಲ್.)ದ ಮೂಲಕ ಕೈಗೊಳ್ಳಲು ಮಂಜೂರಾತಿ ನೀಡಲಾಗಿತ್ತು. |
| ಇ) | ಅನುಮೋದಿತ ಅನುದಾನದಲ್ಲಿ ಇಲ್ಲಿಯವರೆಗೆ ಎಷ್ಟು ಮೊತ್ತ ವ್ಯಯವಾಗಿದೆ ಮತ್ತು ಯಾವ ಯಾವ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ; (ವಿವರ ನೀಡುವುದು) | ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ/1/ಟಿಎಫ್‌ಪಿ/2023, ದಿನಾಂಕ:31.07.2023 ರಲ್ಲಿನ ಕಂಡಿಕೆ-3 ರಲ್ಲಿ ಪ್ರಾರಂಭವಾಗದಿರುವ (Unstarted) ಕಾಮಗಾರಿಗಳ ಬಗ್ಗೆ ಸಂಬಂಧಪಟ್ಟ ಸಚಿವರ ಅನುಮೋದನೆಯೊಂದಿಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಡಳಿತ ಇಲಾಖೆಗೆ ಕ್ರಮವಹಿಸಲು ತಿಳಿಸಲಾಗಿತ್ತು. ಅದರಂತೆ ಹಿಂದಿನ ಸಾಲುಗಳಲ್ಲಿ ಮಂಜೂರಾಗಿ ಅಂದಿನವರೆಗೂ ಪ್ರಾರಂಭಿಸದೇ ಇರುವ ಒಟ್ಟು 144 ಕಾಮಗಾರಿಗಳನ್ನು ಪ್ರಾರಂಭಿಸುವ ಕುರಿತು ಪರಿಶೀಲನೆಯಲ್ಲಿರುತ್ತದೆ. |
| ಈ) | ಉಳಿದ ಕಾಮಗಾರಿಗಳ ಬಗ್ಗೆ ಟೆಂಡರ್ ಪ್ರಕ್ರಿಯೆ ನಡೆದಿದೆಯೇ; ನಡೆದಿದ್ದಲ್ಲಿ, ಕಾಮಗಾರಿ ವಿಳಂಬಕ್ಕೆ ಕಾರಣವೇನು? | ಪ್ರವಾಸೋದ್ಯಮ ಇಲಾಖೆಯಿಂದ ಸದರಿ ತಾಣಕ್ಕೆ ಮೇಲ್ಕಂಡಂತೆ ಒಂದೇ ಕಾಮಗಾರಿಯು ಮಂಜೂರಾಗಿರುತ್ತದೆ. |
| ಉ) | ಶ್ರೀ ಛತ್ರಪತಿ ಷಹಾಜಿರಾಜೆ ಬೋಸಲೆ ಅವರ ಇತಿಹಾಸವನ್ನು ರಾಜ್ಯ ಪ್ರವಾಸೋದ್ಯಮ ನಕ್ಷೆಯಲ್ಲಿ | ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/194/ಟಿಡಿಓ/2025, ದಿನಾಂಕ:07.08.2024 |

| | | |
|---|---|---|
| | ಗುರುತಿಸುವಂತೆ ಸರ್ಕಾರ ಸ್ಮೃತಿ ಸ್ಥಳವನ್ನು ಅಧಿಕೃತ ಪಟದಲ್ಲಿ ಸೇರಿಸಿದೆಯೇ ; | ರಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿ-2024-29ರಡಿ ಶ್ರೀ ರಾಜೇ ಷಹಾಜಿಯ ಸಮಾಧಿ (ಹೊದಿಗೆರೆ) ತಾಣವನ್ನು ಪ್ರವಾಸಿ ತಾಣವನ್ನಾಗಿ ಗುರುತಿಸಿ ಆದೇಶಿಸಲಾಗಿರುತ್ತದೆ. |
| ಊ) | ಸ್ಥಳೀಯ ಜನತೆ, ಪರಾತತ್ವ ಇಲಾಖೆ ಮತ್ತು ಪ್ರವಾಸೋದ್ಯಮ ಇಲಾಖೆಯ ನಡುವೆ ಸಮನ್ವಯ ಸಾಧಿಸಲು ಯಾವುದಾದರು ಸಮಿತಿಯನ್ನು ರಚಿಸಲಾಗಿದೆಯೇ? ರಚಿಸಿದ್ದಲ್ಲಿ ಮಾಹಿತಿಯನ್ನು ಒದಗಿಸುವುದು. | ರಚಿಸಿರುವುದಿಲ್ಲ. |

**ಸಂಖ್ಯೆ: ಟಿಓಆರ್ 186 ಟಿಡಿವಿ 2025**

**(ಹೆಚ್.ಕೆ.ಪಾಟೀಲ)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು